ಜನಮನದ ದನಿ

# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ



ಇಂಡಿಯನ್ ಪ್ರೀಮಿಯರ್ ಲೀಗ್ 2026ರ ಹರಾಜು ಡಿಸೆಂಬರ್ 16 ರಂದು ಅಬುಧಾಬಿಯ ಎತಿಹಾಡ್ ಅರೆನಾದಲ್ಲಿ ನಡೆಯಲಿದೆ ಎಂದು ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ ದೃಢಪಡಿಸಿದೆ.

17 ನವೆಂಬರ್ 2025 ಸೋಮವಾರ ಬೆಲೆ ₹ 2.00 ಸಂಪುಟ : 19 ಸಂಚಿಕೆ : 247 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629



ಭಯೋತ್ಪಾದಕರ ವಿರುದ್ಧದ ಯುದ್ಧ » 2



ಚಿತ್ತಾಪುರದಲ್ಲಿ ಆರ್‌ಎಸ್‌ಎಸ್ ಶಿಸ್ತುಬದ್ಧ ಪಥ ಸಂಚಲನ » 3



ಬ್ಯಾಟಿಂಗ್ ವೈಫಲ್ಯಕ್ಕೆ ಬೆಲೆತೆತ್ತ ಭಾರತ » 4

# ಪಕ್ಷಕ್ಕೆ ಬ್ಲ್ಯಾಕ್ ಮೇಲ್ ಮಾಡಲ್ಲ

## ನಾನೇಕೆ ಕೆಪಿಸಿಸಿ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಲಿ | ಡಿ.ಕೆ.ಶಿವಕುಮಾರ್ ಪ್ರಶ್ನೆ

• ಪ್ರಜೋದಯ ವರದಿ

**ನವದೆಹಲಿ:** ನಾನು ಪಕ್ಷದ ಶಿಸ್ತಿನ ಸಿಪಾಯಿ. ಯಾವತ್ತೂ ಕಾಂಗ್ರೆಸ್ ಪಕ್ಷಕ್ಕೆ ಬ್ಲ್ಯಾಕ್ ಮೇಲ್ ಮಾಡು ವವ ನಲ್ಲ. ನಾನು ಹಗಲು ರಾತ್ರಿ ದುಡಿದು ಪಕ್ಷ ಕಟ್ಟಿದ್ದೇನೆ. ಮುಂದೆಯೂ ಕಟ್ಟುತ್ತೇನೆಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಹೇಳಿದ್ದಾರೆ.

ಕೆಪಿಸಿಸಿ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಲಾಗಿದೆ ಎಂಬ ಸುದ್ದಿ ಹರಿದಾಡುತ್ತಿರುವ ಹಿನ್ನಲೆಯಲ್ಲಿ ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನನ್ನ ಮಾನಸಿಕ, ದೈಹಿಕ, ರಾಜಕೀಯ ಆರೋಗ್ಯ ಸರಿಯಾಗಿದೆ. ನಾನೇಕೆ ರಾಜೀನಾಮೆ ನೀಡಲಿ ಎಂದು ಪ್ರಶ್ನಿಸಿದರು.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಭೇಟಿ ಮಾಡಲು ಹೋಗುತ್ತಿದ್ದೇನೆ. ಡಿಸೆಂಬರ್ ತಿಂಗಳ ಒಳಗಾಗಿ ನೂರು ಕಾಂಗ್ರೆಸ್ ಕಚೇರಿಗಳಿಗೆ ಶಂಕುಸ್ಥಾಪನೆ ಮಾಡಲೇಬೇಕಾಗಿದೆ. ಗಾಂಧಿ ಭಾರತ ಎಂಬ ಪುಸ್ತಕ ರಚಿಸಿದ್ದೇನೆ. ಇದರ ಬಿಡುಗಡೆಗೆ ದಿನಾಂಕ ನಿಗದಿ ಮಾಡಬೇಕಾಗಿದೆ. ಸದ್ಯದಲ್ಲೇ ಸಂಸತ್ ಅಧಿವೇಶನ ಆರಂಭವಾಗಲಿದೆ. ಕಾಂಗ್ರೆಸ್ ಸಂಸ್ಥಾಪನಾ ದಿನ ಆಚರಣೆ ಮಾಡಬೇಕು. ಇದೆಲ್ಲವನ್ನು ಯಾರು ಮಾಡಬೇಕು, ನಾನೇ ಮಾಡಬೇಕು. ನಾನೇಕೆ ರಾಜೀನಾಮೆ ನೀಡಲಿ. ಈಗ ಅಂತಹ ಸಂದರ್ಭವಿಲ್ಲ ಎಂದು ತಿಳಿಸಿದರು.

### ಮುಖ್ಯಮಂತ್ರಿಗೆ ಬಿಟ್ಟ ವಿಚಾರ

ಸಚಿವ ಸಂಪುಟ ಪುನಾರಚನೆ ಬಗ್ಗೆ ಚರ್ಚೆಯಾಗುತ್ತಿದೆ, ಖರ್ಗೆ ಅವರ ಭೇಟಿ ವೇಳೆ ಈ ಬಗ್ಗೆ ಚರ್ಚೆ ಮಾಡುತ್ತೀರಾ ಎಂದು ಕೇಳಿದಾಗ, ಅದೆಲ್ಲಾ ಮುಖ್ಯಮಂತ್ರಿಗಳಿಗೆ ಬಿಟ್ಟ ವಿಚಾರ.



### ದೆಹಲಿಯಲ್ಲಿ ರಾಜಕೀಯ ಚಟುವಟಿಕೆ

ರಾಜ್ಯದಲ್ಲಿ ನವೆಂಬರ್ ಕ್ರಾಂತಿ ಚರ್ಚೆ ನಡುವೆ ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ಕರ್ನಾಟಕದ ರಾಜಕೀಯ ಚಟುವಟಿಕೆಗಳು ಗರಿಗೆದರಿವೆ. ಹೈದರಾಬಾದ್ ಪ್ರವಾಸ ರದ್ದುಪಡಿಸಿರುವ ಡಿ.ಕೆ.ಶಿವಕುಮಾರ್, ದೆಹಲಿಯಲ್ಲೇ ತಂಗಲಿದ್ದಾರೆ. ಇತ್ತ ಮಾಜಿ ಸಂಸದ ಡಿ.ಕೆ.ಸುರೇಶ್ ಕೂಡ ಬೆಂಗಳೂರಿನಿಂದ ದೆಹಲಿಗೆ ಹೊರಟಿರೋದು ಕುತೂಹಲಕ್ಕೆ ಕಾರಣವಾಗಿದೆ. ರಾಹುಲ್ ಗಾಂಧಿ ಭೇಟಿಗೂ ಡಿ.ಕೆ.ಶಿವಕುಮಾರ್ ಈಗಾಗಲೇ ಸಮಯ ಕೇಳಿದ್ದಾರೆ. ಸೋಮವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತೆ ದೆಹಲಿ ಪ್ರವಾಸ ಹಿನ್ನೆಲೆ, ಸೋಮವಾರವೂ ದೆಹಲಿಯಲ್ಲೇ ಡಿ.ಕೆ.ಶಿವಲಿಂಗೇಗೌಡ ಅವರು

ಅವರು ಹೈಕಮಾಂಡ್ ಬಳಿ ಚರ್ಚೆ ಮಾಡುತ್ತಾರೆ. ನನ್ನನ್ನು ಕರೆದರೆ ನಾನು ಹೋಗುತ್ತೇನೆ. ನಾನು ಕೇವಲ ಪಕ್ಷದ ಕಚೇರಿಗಳ ಶಂಕುಸ್ಥಾಪನೆಗೆ ದಿನಾಂಕ ನಿಗದಿ ಮಾಡಲು ಹೋಗುತ್ತಿರುವೆ. ರಾಹುಲ್ ಗಾಂಧಿ, ಮಲ್ಲಿಕಾರ್ಜುನ ಖರ್ಗೆ ಅವರು ಒಟ್ಟಾಗಿ ಶಂಕುಸ್ಥಾಪನೆ ಮಾಡ ಬೇಕೆಂಬುದು ನನ್ನ ಆಸೆ. ಡಿ.1 ರಿಂದ ಸಂಸತ್ ಅಧಿವೇಶನ ಆರಂಭವಾಗಲಿದ್ದು, ಅಷ್ಟರೊಳಗೆ, ವಾರಾಂತ್ಯದಲ್ಲಿ ಬಂದು ಹೋಗಿ ಎಂದು ಮನವಿ ಮಾಡುತ್ತೇನೆಂದರು.

### ಪಕ್ಷ ಅಧಿಕಾರಕ್ಕೆ ತರಲು ದುಡಿಯುವೆ

ಕಾಂಗ್ರೆಸ್ ಪಕ್ಷ ಎಲ್ಲಿಯವರೆಗೂ ಈ ಸ್ಥಾನದಲ್ಲಿ ಕೆಲಸ ಮಾಡಲು ಹೇಳುತ್ತಾರೋ ಅಲ್ಲಿಯವರೆಗೆ ನಾನು ಪಕ್ಷದ ಶಿಸ್ತಿನ ಸಿಪಾಯಿಯಂತೆ ಕೆಲಸ ಮಾಡಿಕೊಂಡು ಹೋಗುತ್ತೇನೆ. ಮುಂದೆಯೂ ಪಕ್ಷ ಅಧಿಕಾರಕ್ಕೆ ಬರುವಂತೆ ದುಡಿಯುವವನು ನಾನು ಎಂದು ಸ್ಪಷ್ಟಪಡಿಸಿ, ಕಾಂಗ್ರೆಸ್ ಕಚೇರಿ ನಿರ್ಮಾಣದ ಕಟ್ಟಡ ನಕ್ಷೆ ಅನುಮೋದನೆಗೆ ನಾನು 2.30 ಕೋಟಿ ಹಣವನ್ನು ಪಾವತಿಸುತ್ತಿದ್ದೇನೆ. ರಾಮಲಿಂಗಾರೆಡ್ಡಿ ಅವರ ಮುಂದಾಳತ್ವದಲ್ಲಿ ಒಂದು ಕಚೇರಿ ನಿರ್ಮಿಸಲಾಗುತ್ತಿದೆ. 75–80 ಕಡೆ ಕಚೇರಿ ನಿರ್ಮಾಣಕ್ಕೆ ಜಾಗ ಕೂಡ ಸಿದ್ಧವಾಗಿವೆ. ನೂರು ಕಚೇರಿ ನಿರ್ಮಾಣ ಕಾರ್ಯ ಮಾಡುತ್ತೇವೆಂದು ತಿಳಿಸಿದರು.

# 30 ವರ್ಷದ ಬಳಿಕ ತೆಂಗಿನಕಾಯಿ ಸಂತೆ ಪುನರಾರಂಭ

## ಶಾಸಕ ಸಿ.ಎನ್.ಬಾಲಕೃಷ್ಣ ಚಾಲನೆ | ಮಾರುಕಟ್ಟೆ ಅಭಿವೃದ್ಧಿಗೆ 1.50 ಕೋ.ರೂ.

• ಪ್ರಜೋದಯ ವರದಿ

**ನುಗ್ಗೇಹಳ್ಳಿ:** ಅನಿವಾರ್ಯ ಕಾರಣಗಳಿಂದ 30 ವರ್ಷಗಳಿಂದ ಸ್ಥಗಿತಗೊಂಡಿದ್ದ ತೆಂಗಿನಕಾಯಿ ಸಂತೆ, ಜಾನುವಾರುಗಳು ಹಾಗು ತರಕಾರಿ ಸಂತೆಗೆ ಚಾಲನೆ ನೀಡಿ, ರೈತರು ಮತ್ತು ವರ್ತಕರಿಗೆ ಅವಕಾಶ ನೀಡಲಾಗಿದೆ ಎಂದು ಶಾಸಕ ಸಿ.ಎನ್.ಬಾಲಕೃಷ್ಣ ಅವರು ತಿಳಿಸಿದರು.

ಎಪಿಎಂಸಿ ಉಪ ಮಾರುಕಟ್ಟೆಯಲ್ಲಿ ಭಾನುವಾರ ತೆಂಗಿನಕಾಯಿ ಸಂತೆಗೆ ಚಾಲನೆ ನೀಡಿ ಮಾತನಾಡಿದ ಅವರು, 30 ವರ್ಷಗಳ ಹಿಂದೆ ಹೋಬಳಿ ಕೇಂದ್ರದ ಎಪಿಎಂಸಿ ಉಪ ಮಾರುಕಟ್ಟೆಯಲ್ಲಿ ಕಾಯಿ ಸೇರಿ ರೈತರ ಸಂತೆ ನಡೆಯುತ್ತಿತ್ತು. ರೈತರು ಹಾಗು ಕಾಯಿ ವ್ಯಾಪಾರಸ್ಥರ ಮನವಿ ಮೇರೆಗೆ ಪ್ರತಿ ಭಾನುವಾರ ತೆಂಗಿನಕಾಯಿ ಜಾನುವಾರು, ಸೇರಿ ರೈತರು ಬೆಳೆದ ಎಲ್ಲಾ ಪದಾರ್ಥಗಳನ್ನು ಮಾರಾಟ ಮಾಡಲು ಭಾನುವಾರದ ಸಂತೆಯ ಮೂಲಕ ಅವಕಾಶ ಕಲ್ಪಿಸಲಾಗಿದೆ ಎಂದು ತಿಳಿಸಿದರು.



> ನುಗ್ಗೇಹಳ್ಳಿ ಹೋಬಳಿ ಕೇಂದ್ರದ ಎಪಿಎಂಸಿ ಉಪ ಮಾರುಕಟ್ಟೆ ಪ್ರಾಂಗಣದಲ್ಲಿ ವಾಣಿಜ್ಯ ಮಳಿಗೆ ಸೇರಿ ಮಾರುಕಟ್ಟೆಯನ್ನು 1.50 ಕೋ.ರೂ. ವೆಚ್ಚದಲ್ಲಿ ಅಭಿವೃದ್ಧಿ ಪಡಿಸಲಾಗುವುದು.
> –ಸಿ.ಎನ್.ಬಾಲಕೃಷ್ಣ, ಶಾಸಕ

ಈಗಾಗಲೇ ಹೋಬಳಿ ಕೇಂದ್ರದ ಅಕ್ಕನಹಳ್ಳಿ ಕೂಡಿನಲ್ಲಿ ಭಾನುವಾರ ಸಂತೆ ನಡೆಯುತ್ತಿದೆ. ಆದರೆ, ಸಂಚಾರ ದಟ್ಟಣೆ ಸೇರಿ ರೈತರಿಗೆ ಉತ್ತಮ ಪ್ರಾಂಗಣದಲ್ಲಿ ವ್ಯಾಪಾರ ವಹಿವಾಟು ನಡೆಸುವ ಸಲುವಾಗಿ ಹೋಬಳಿ

» ನಾಲ್ಕನೇ ಪುಟದಲ್ಲಿ

# ರೈತಾಪಿ ವರ್ಗ ಸಹಕಾರಿ ಕ್ಷೇತ್ರದ ಸದ್ಬಳಕೆ ಮಾಡಿಕೊಳ್ಳಿ

## ಹೆಚ್‌ಡಿಸಿಸಿ ಬ್ಯಾಂಕ್ ಅಧ್ಯಕ್ಷ ಸೋಮನಹಳ್ಳಿ ನಾಗರಾಜ್ ಕರೆ



• ಪ್ರಜೋದಯ ವರದಿ

**ಬೇಲೂರು :** ಸಹಕಾರಿ ಕ್ಷೇತ್ರ ರಾಜ್ಯ ಮತ್ತು ದೇಶಗಳಲ್ಲಿ ವ್ಯಾಪಕವಾಗಿ ಬೆಳೆಯುವ ಮೂಲಕ ಗ್ರಾಮೀಣಾಭಿವೃದ್ಧಿಗೆ ಹೆಚ್ಚಿನ ಕೊಡುಗೆ ನೀಡುತ್ತಿರುವ ಹಿನ್ನಲೆ ರೈತಾಪಿ ವರ್ಗ ಸಹಕಾರಿ ಕ್ಷೇತ್ರದಸದ್ಬಳಕೆಮಾಡಿಕೊಳ್ಳಬೇಕೆಂದು ಹೆಚ್‌ಡಿಸಿಸಿ ಬ್ಯಾಂಕ್ ಅಧ್ಯಕ್ಷ ಸೋಮನಹಳ್ಳಿ ನಾಗರಾಜ್ ಅವರು ಕರೆ ನೀಡಿದರು.

ಪಟ್ಟಣದ ಜೆ.ಪಿ.ನಗರದ ಆರ್ವಿ ಕಲ್ಯಾಣ ಮಂಟಪದಲ್ಲಿ ಏರ್ಪಡಿಸಲಾಗಿದ್ದ 72ನೇ ಅಖಿಲ ಭಾರತ ಸಹಕಾರ ಸಪ್ತಾಹ ಉದ್ಘಾಟಿಸಿ ಮಾತನಾಡಿದ ಅವರು, ಸಹಕಾರ ಸಂಸ್ಥೆಗಳ ಮೂಲಕ ರೈತರಿಗೆ ಸೌಲಭ್ಯಯುತ ಸಾಲ ವಿತರಣೆ, ಮಹಿಳಾ ಸ್ವಸಹಾಯ ಗುಂಪುಗಳ ಬಲವರ್ಧನೆ, ಹಾಲು ಉತ್ಪಾದನಾ ಸಹಕಾರಿ ಸಂಘಗಳ ಅಭಿವೃದ್ಧಿ, ಗ್ರಾಮೀಣ ಯುವಕರಿಗೆ ಉದ್ಯೋಗಾವಕಾಶಗಳು ಇವೆಲ್ಲವೂ ಗ್ರಾಮೀಣ ಜೀವನಮಟ್ಟವನ್ನು ಎತ್ತುವಲ್ಲಿ ಮಹತ್ತರ ಪಾತ್ರ ವಹಿಸುತ್ತಿದೆ ಎಂದು ಹೇಳಿದರು.

ಹಾಸನ ಒಕ್ಕೂಟದಲ್ಲಿ 1400 ಹಾಲು ಉತ್ಪಾದಕರ ಸಂಘ ಹಾಗು 215ಕ್ಕೂ ಹೆಚ್ಚು ಕೃಷಿ ಪತ್ತಿನ ಮಹಿಳಾ ಸಂಘಗಳಿದ್ದು, ವಾರ್ಷಿಕವಾಗಿ 3 ಸಾವಿರ ಕೋ.ರೂ. ವಹಿವಾಟು ನಡೆಸುತ್ತಿದೆ. ಇದರ ಜೊತೆಯಲ್ಲಿ 1200 ಕೋ.ರೂ. ರೈತರಿಗೆ ಕೃಷಿ ಸಾಲ ನೀಡಲಾಗಿದೆ. ಮಹಿಳೆಯರ ಆರ್ಥಿಕ ಸ್ವಾವಲಂಬಿ ಬದುಕು ರೂಪಿಸಿಕೊಳ್ಳಲು ಸುಮಾರು 5 ಲ.ರೂ. ಹಣ ನೀಡುತ್ತಾ ಬಂದಿದೆ. ಶೀಘ್ರವಾಗಿ ರಾಜ್ಯದ ಎಲ್ಲಾ ಸಹಕಾರ ಬ್ಯಾಂಕ್ ಡಿಜಿಟಲೀಕರಣ ಆಗಲಿದೆ ಎಂದರು.

ಹೆಚ್‌ಡಿಸಿಸಿ ಬ್ಯಾಂಕ್ ನಿರ್ದೇಶಕ ಎಂ.ಎ.ನಾಗರಾಜ್ ಅವರು ಮಾತನಾಡಿ, ಸಹಕಾರ ಕ್ಷೇತ್ರ ಹಾಗು ಹೈನುಗಾರಿಕೆ ವಲಯ ರಾಜ್ಯದಲ್ಲಿ ಶ್ರೇಷ್ಠ

» ನಾಲ್ಕನೇ ಪುಟದಲ್ಲಿ

# ಕಾಫಿ ಬೆಳೆಗಾರರಿಗೆ ಡಿಫಾರೆಸ್ಟ್ರೇಷನ್ ಸವಾಲು

## ಯೂರೋಪಿಯನ್ ಯೂನಿಯನ್‌ನಿಂದ ಹೊಸ ನಿಯಮ ಜಾರಿ | ಜಿಯೋಲೊಕೇಷನ್ ಇಲ್ಲದ ಕಾಫಿ ಆಮದಿಗೆ ಸಂಕಷ್ಟ

• ಪ್ರಜೋದಯ ವರದಿ

**ಹಾಸನ:** ಭಾರತದಲ್ಲಿ ಉತ್ಪಾದನೆಯಾಗುವ ಹೆಚ್ಚಿನ ಪ್ರಮಾಣದ ಕಾಫಿ ಯುರೋಪಿಯನ್ ರಾಷ್ಟ್ರಗಳಿಗೆ ರಫ್ತು ಮಾಡಲಾಗುತ್ತಿದೆ. ಹೀಗಾಗಿ ಆಮದು ಮಾಡಿಕೊಳ್ಳುವ ಭಾರತದ ಕಾಫಿಗೆ ಯೂರೋಪಿಯನ್ ಯೂನಿಯನ್ ಡಿಫಾರೆಸ್ಟ್ರೇಷನ್ ರೆಗ್ಯೂಲೇಷನ್ (ಇಯುಡಿಆರ್) ಜಾರಿಗೊಳಿಸಲಾಗಿದೆ.

ಕಾಫಿ ಬೆಳೆಗಾರರು ಹವಾಮಾನ ವೈಪರೀತ್ಯ, ಕಾಡು ಪ್ರಾಣಿಗಳ ಹಾವಳಿ, ರೋಗಬಾಧೆ, ಕೂಲಿ ಕಾರ್ಮಿಕರ ಸಮಸ್ಯೆಯನ್ನು ಎದುರಿಸುತ್ತಿದ್ದಾರೆ. ಇದರ ನಡುವೆ ಯುರೋಪಿಯನ್ ಯೂನಿಯನ್ ಹೊಸ ನಿಯಮ ಜಾರಿಗೊಳಿಸಿದ್ದು, ಅದರಂತೆ ಕಾಫಿ ಬೆಳೆಗಾರರು ತಮ್ಮ ತೋಟಗಳನ್ನು ಜಿಯೋಲೊಕೇಷನ್ ಹಾಗು ಪೋಲಿಗಾನ್ ಗಡಿ ಗುರುತು ಮಾಡಬೇಕಿದೆ.

ಕಾಫಿ ಧಾರಣೆ ಐತಿಹಾಸಿಕ ದಾಖಲೆ ಬರೆದಿದೆ. ಈ ವರ್ಷ ಕೂಡ ಉತ್ತಮ ಬೆಲೆಯ ನಿರೀಕ್ಷೆಯಲ್ಲಿ ಬೆಳೆಗಾರರಿದ್ದಾರೆ. ಭಾರತ ತನ್ನ ಉತ್ಪಾದನೆಯ ಶೇ.70ಕ್ಕಿಂತ ಹೆಚ್ಚು ಕಾಫಿಯನ್ನು ವಿವಿಧ ರಾಷ್ಟ್ರಗಳಿಗೆ ರಫ್ತು ಮಾಡುತ್ತದೆ. ಇದರಲ್ಲಿ ಯುರೋಪಿನ ರಾಷ್ಟ್ರಗಳ ಪಾಲು ಶೇ.60ರಷ್ಟು. ಈಗ ಯೂರೋಪಿಯನ್ ಒಕ್ಕೂಟ ಭಾರತದ ಕಾಫಿಯ ಮೇಲೂ ಡಿಫಾರೆಸ್ಟ್ರೇಷನ್ ನಿಯಮ ಜಾರಿ ಗೊಳಿಸಿದ್ದು, ಇದರ ಪರಿಣಾಮ ನೇರವಾಗಿ ಭಾರತದ ಕಾಫಿ ಬೆಳೆಗಾರರು ಹಾಗು ರಫ್ತುದಾರರ ಮೇಲೆ ಬೀರಲಿದೆ. ಹೀಗಾಗಿ ಬೆಳೆಗಾರರಿಗೆ ಡಿಫಾರೆಸ್ಟ್ರೇಷನ್ ಸವಾಲಾಗಿ ಪರಿಣಮಿಸಿದೆ.



> ಅರಣ್ಯ ಸಂರಕ್ಷಣೆ ದೃಷ್ಟಿಯಿಂದ ಯೂರೋಪಿಯನ್ ರಾಷ್ಟ್ರಗಳು ಆಮದು ಮಾಡಿಕೊಳ್ಳುವ ಕೃಷಿ ಉತ್ಪನ್ನಗಳ ಮೇಲೆ ಯುರೋಪಿಯನ್ ಯೂನಿಯನ್ ಡಿಫಾರೆಸ್ಟ್ರೇಷನ್ ರೆಗ್ಯೂಲೇಷನ್ ಜಾರಿಗೊಳಿಸಲಾಗಿದೆ. ಸದ್ಯಕ್ಕೆ ವಿನಾಯಿತಿ ಇದ್ದು, ಮುಂದಿನ ದಿನಗಳಲ್ಲಿ ಕಡ್ಡಾಯವಾಗಿ ಪಾಲನೆ ಮಾಡಬೇಕಿದೆ.
> –ಸುರೇಂದ್ರ, ಬೆಳೆಗಾರರ ಸಂಘದ ಕಾರ್ಯದರ್ಶಿ

### ಆ್ಯಪ್ ಅಭಿವೃದ್ಧಿ, ಜಾಗೃತಿ ಕಾರ್ಯ

ಇಯುಡಿಆರ್ ಜಾರಿಗೊಳಿಸಲು ಕಾಫಿ ಬೋರ್ಡ್‌ನಿಂದಲೇ ಆ್ಯಪ್ ಅಭಿವೃದ್ಧಿ ಪಡಿಸಲಾಗಿದೆ. ಬೋರ್ಡ್‌ನಿಂದಲೇ ಜಿಯೋಲೋಕೇಷನ್ ಮಾಡಿಕೊಡಲಾಗುತ್ತಿದೆ. ಜಿಲ್ಲೆಯಲ್ಲೂ ಈ ಕಾರ್ಯ ಪ್ರಗತಿಯಲ್ಲಿದೆ. ಈ ಬಗ್ಗೆ ಬೆಳೆಗಾರರಿಗೆ ಜಾಗೃತಿ ಮೂಡಿಸುವ ಕೆಲಸ ಕೂಡ ನಡೆಯುತ್ತಿದೆ. ಎಲ್ಲಾ ಬೆಳೆಗಾರರು ಮಾಡಿಸಿಕೊಳ್ಳುವುದು ಕಡ್ಡಾಯ ಮತ್ತು ಅನಿವಾರ್ಯ ಕೂಡ ಆಗಿದೆ. ಇದರಿಂದ ಮುಂದಿನ ದಿನಗಳಲ್ಲಿ ಸರ್ಕಾರದ ಸೌಲಭ್ಯ ಪಡೆದುಕೊಳ್ಳಲು ಅನುಕೂಲವಾಗಲಿದೆ.

ಕಾಫಿ ಬೆಳೆಗಾರರು ಈ ಬಾರಿಯ ಫಸಲು ಮಾರಾಟಕ್ಕೂ ಮೊದಲು ಜಿಯೋಲೊಕೇಷನ್ ಮಾಹಿತಿ ಹಾಗು ಪೋಲಿಗಾನ್ ಗಡಿಗಳನ್ನು ಜಿಯೋಜೆಸಾನ್ ಫಾರ್ಮೆಟ್‌ನಲ್ಲಿ ಒದಗಿಸಿದಾಗ ಮಾತ್ರ ಯುರೋಪ್ ರಾಷ್ಟ್ರಗಳಿಗೆ ರಫ್ತು ಮಾಡಲು ಅವಕಾಶ ಸಿಗಲಿದೆ.

### ಸಣ್ಣ ಬೆಳೆಗಾರರಿಗೂ ನಿಯಮ ಅನ್ವಯ

4 ಹೆಕ್ಟೇರ್ ಒಳಗಿನ ತೋಟಗಳಿಗೆ ಜಿಯೋಲೊಕೇಷನ್ ಸಾಕು. 4 ಹೆಕ್ಟೇರ್‌ಗಿಂತ ದೊಡ್ಡದಾಗಿರುವ ತೋಟಗಳಿಗೆ ಪೋಲಿಗಾನ್ ಗಡಿ ಮಾಹಿತಿ ಕಡ್ಡಾಯವಾಗಿದೆ. ಜೊತೆಗೆ ಈ ನಿಯಮವು ನೇರವಾಗಿ ಯುರೋಪ್ ರಾಷ್ಟ್ರಗಳಿಗೆ ಕಾಫಿ ರಫ್ತು ಮಾಡುವ ರಫ್ತುದಾರರು, ಯುರೋಪ್ ಮಾರುಕಟ್ಟೆಗೆ ಪೂರೈಕೆ ಮಾಡುವ ವ್ಯಾಪಾರಿಗಳು, ಕಾಫಿ ಕ್ಯೂರ್‌ಗಳು ಹಾಗು ಕಾಫಿ ಮಾರುವ ಬೆಳೆಗಾರರಿಗೂ ಅನ್ವಯವಾಗಲಿದೆ.

### ಏನಿದು ಡಿ ಡಿಫಾರೆಸ್ಟ್ರೇಷನ್ ನಿಯಮ

ಈಗಾಗಲೇ ಯೂರೋಪಿಯನ್ ಯುನಿಯನ್ ಡಿಫಾರೆಸ್ಟ್ರೇಷನ್

» ನಾಲ್ಕನೇ ಪುಟದಲ್ಲಿ


# ಅಭಿವೃದ್ಧಿ ಕಾಮಗಾರಿಗೆ 10 ಕೋ.ರೂ. ಮೀಸಲು

## ಅಡಗೂರು ಮುಖ್ಯರಸ್ತೆ ವಿಸ್ತರಣಾ ಕಾಮಗಾರಿಗೆ ಶಾಸಕ ಹೆಚ್.ಕೆ.ಸುರೇಶ್ ಚಾಲನೆ

• ಪ್ರಜೋದಯ ವರದಿ

**ಹಳೇಬೀಡು:** ಅಡಗೂರು ಗ್ರಾಮಕ್ಕೆ ಮುಖ್ಯರಸ್ತೆ ವಿಸ್ತರಣಾ ಕಾಮಗಾರಿಗೆ 6 ಕೋ.ರೂ. ವೆಚ್ಚದಲ್ಲಿ ಕೈಗೊಳ್ಳಲಾಗಿದೆ. ಚೆಕ್ ಡ್ಯಾಂ ಹಾಗು ಇತರೆ ಅಭಿವೃದ್ಧಿ ಕಾಮಗಾರಿಗೆ 10 ಕೋ.ರೂ. ಮೀಸಲಿಟ್ಟಿದ್ದೇನೆಂದು ಶಾಸಕ ಹೆಚ್.ಕೆ.ಸುರೇಶ್ ಅವರು ತಿಳಿಸಿದರು.

ಅಡುಗೂರು ಗ್ರಾಮದ ಮುಖ್ಯ ರಸ್ತೆ ಅಗಲೀಕರಣ ಕಾಮಗಾರಿಗೆ ಚಾಲನೆ ನೀಡಿ ಮಾತನಾಡಿದ ಅವರು, ಅಡಗೂರು ಗ್ರಾಮದಿಂದ ನೀರಳ್ಳ ರಸ್ತೆ ಡಾಂಬರೀಕರಣ ಹಾಗು ರಾಷ್ಟ್ರೀಯ ರಸ್ತೆಗೆ ಕಾಯಕಲ್ಪ ಪ್ರಾರಂಭವಾಗಿದೆ. ನನ್ನ ವಿಧಾನಸಭಾ ಕ್ಷೇತ್ರಕ್ಕೆ ಸುಮಾರು 6 ಕೋ.ರೂ. ವೆಚ್ಚದಲ್ಲಿ ಅಡಗೂರು ಮತ್ತು ಹಗರೆ, ಚೀಕನಹಳ್ಳಿ, ಅರೇಹಳ್ಳಿ ಹಾಗು ಗೆಂಡೆಹಳ್ಳಿ ಮತ್ತು ಬೇರೆ ಭಾಗಗಳಿಗೆ ತಾಲ್ಲೂಕಿನಿಂದ ಬರುವಂತಹ ಜನರಿಗೆ ಕೂಡು ರಸ್ತೆಗಳನ್ನು ಈಗಾಗಲೇ ಕಾಯಕಲ್ಪ ನೀಡಲಾಗಿದೆ ಎಂದು ಹೇಳಿದರು.



ಗ್ರಾಮದ ಅಭಿವೃದ್ಧಿ ನಿಮ್ಮೆಲ್ಲರ ಸಹಕಾರ ಅತೀ ಮುಖ್ಯ. ಸುಮಾರು 10 ಮೀಟರ್ ರಸ್ತೆ ಅಗಲೀಕರಣವಾಗುವುದರಿಂದ ಮುಂದಿನ ಭವಿಷ್ಯದ ಉದ್ದೇಶದಿಂದ ಎಲ್ಲರ ಸಹಕಾರ ಬೇಕು. ಇನ್ನು ಅಡಗೂರು ಕೆರೆ ಅಭಿವೃದ್ಧಿಗಾಗಿ ಸುಮಾರು 1.50 ಕೋ.ರೂ. ನೀರಾವರಿ ಇಲಾಖೆಯಿಂದ ಹಣ ತಂದು ಅಭಿವೃದ್ಧಿ ಪಡಿಸಿದ್ದೇನೆ. ಹಳೆಬೀಡು ಮುಖ್ಯರಸ್ತೆ ಅಗಲೀಕರಣವಾಗುತ್ತಿದ್ದು, ಹೊಯ್ಸಳ ವೃತ್ತ

» ನಾಲ್ಕನೇ ಪುಟದಲ್ಲಿ

# ಸಂಪುಟ ಪುನರ್ ರಚನೆಯಾದರೆ ನಾಯಕತ್ವ ಬದಲಾವಣೆ ಇಲ್ಲ

• ಪ್ರಜೋದಯ ವರದಿ

**ಬೆಂಗಳೂರು:** ಸಂಪುಟ ಪುನರ್ ರಚನೆಗೆ ಹೈಕಮಾಂಡ್ ಒಪ್ಪಿಗೆ ನೀಡಿದರೆ ನಾಯಕತ್ವ ಬದಲಾವಣೆ ಆಗುವುದಿಲ್ಲವೆಂದು ಗೃಹ ಸಚಿವ ಜಿ.ಪರಮೇಶ್ವರ್ ಅವರು ಹೇಳಿದರು.

ಸುದ್ದಿಗಾರರ ಜೊತೆ ಭಾನುವಾರ ಮಾತನಾಡಿದ ಅವರು, ಮುಖ್ಯಮಂತ್ರಿ ಮತ್ತು ಹೈ ಕಮಾಂಡ್‌ಗೆ ಎಲ್ಲಾ ವಿಚಾರ ಗೊತ್ತಿದೆ. ಸಂಪುಟ ಪುನರ್ ರಚನೆಗೆ ಅನುಮತಿ ಸಿಕ್ಕಿದೆ ಎಂದು ಮಾಧ್ಯಮಗಳಲ್ಲಿ ನೋಡಿದ್ದೇನೆ. ಸಂಪುಟ ಪುನರ್ ರಚನೆಯಾದರೆ ಒಳ್ಳೆಯದೇ ಎಂದರು.


# ಭಕ್ತರು, ಹಿರಿಯರ ಸೇವೆಯೇ ಮಠದ ಧರ್ಮ

• ಪ್ರಜೋದಯ ವರದಿ

- ಶ್ರೀ ಚನ್ನಬಸವೇಶ್ವರ ದೇಶಿಕೇಂದ್ರ ಸ್ವಾಮೀಜಿ ಅಭಿಮತ
- ಸಂಕಲಾಪುರ ನೂತನ ಕಿರಿಯ ಮಠಾಧೀಶರಿಗೆ ಬೀಳ್ಕೊಡುಗೆ

**ಹಾಸನ:** ಮಠಾಧೀಶರಾಗಿ ನೇಮಕವಾಗು ವುದು ಗೌರವದ ಜೊತೆಗೆ ಜವಾಬ್ದಾರಿಯೂ ಹೌದು. ಭಕ್ತರು, ಹಿರಿಯರ ಸೇವೆಯೇ ನಿಜವಾದ ಮಠದ ಧರ್ಮ ಎಂದು ಬೆಟ್ಟದಪುರ ಕನ್ನಡ ಮಠದ ಮಠಾಧೀಶರಾದ ಶ್ರೀ ಚನ್ನಬಸವೇಶ್ವರ ದೇಶಿಕೇಂದ್ರ ಸ್ವಾಮೀಜಿ ಅವರು ತಿಳಿಸಿದರು.

ನಗರದ ತಣ್ಣೀರುಹಳ್ಳ ಮಠದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಸಂಕಲಾಪುರ ಮಠದ ನೂತನ ಕಿರಿಯ ಮಠಾಧೀಶರಾಗಿ ನೇಮಕಗೊಂಡಿರುವ ಶ್ರೀ ಮಂಜುನಾಥ ಸ್ವಾಮೀಜಿ ಅವರನ್ನು ತಣ್ಣೀರುಹಳ್ಳ ಮಠದಿಂದ ಸಂಕಲಾಪುರ ಮಠಕ್ಕೆ ಕಳುಹಿಸಿಕೊಡುವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕಳೆದ 7 ಏಳು ವರ್ಷಗಳಿಂದ ಮಂಜುನಾಥ್ ಅವರು ತಣ್ಣೀರುಹಳ್ಳ ಮಠದಲ್ಲಿ ಶ್ರೀ ವಿಜಯಕುಮಾರ ಸ್ವಾಮೀಜಿ ಅವರೊಂದಿಗೆ ಪೂಜೆ, ಪರಿವರ್ತನೆಗಳಲ್ಲಿ ತೊಡಗಿಕೊಂಡು ಸೇವೆ ಸಲ್ಲಿಸಿದ್ದರು. ಅವರು ಇದೀಗ ಸಂಕಲಾಪುರ ಮಠದ ಕಿರಿಯ ಸ್ವಾಮೀಜಿಗಳಾಗಿ ಆಯ್ಕೆಗೊಂಡಿರು



» ನಾಲ್ಕನೇ ಪುಟದಲ್ಲಿ

## 5,655 ಹೆಕ್ಟೇರ್ ಬೆಳೆ ಹಾನಿ | ಪರಿಹಾರ ಕೋರಿ ಸರ್ಕಾರಕ್ಕೆ ಜಿಲ್ಲಾಧಿಕಾರಿ ಲತಾ ಕುಮಾರಿ ಸುದೀರ್ಘ ಪತ್ರ

# ಬಿಳಿಸುಳಿ ರೋಗ: ಬೀಜ ವಿತರಣೆ ಕಂಪನಿಗಳೇ ಹೊಣೆಗಾರರು

• ಪ್ರಜೋದಯ ವರದಿ

**ಹಾಸನ:** ಮುಂಗಾರು ಹಂಗಾಮಿನಲ್ಲಿ ಬಿತ್ತನೆ ಮಾಡಲಾಗಿದ್ದ ಮುಸುಕಿನ ಜೋಳ ಬಿಳಿಸುಳಿ ರೋಗದಿಂದ ಹಾನಿಗೀಡಾಗಿದ್ದು, ಸರ್ಕಾರ ಅನ್ನದಾತರ ನೆರವಿಗೆ ಸರ್ಕಾರ ಧಾವಿಸಬೇಕು ಹಾಗು ಕಳಪೆ ಬಿತ್ತನೆ ಬೀಜ ವಿತರಿಸಿದ ಕಂಪನಿಗಳು ನೈತಿಕ ಹೊಣೆ ಹೊತ್ತು ಸಹಾಯಕ್ಕೆ ಬರಬೇಕೆಂದು ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ಅವರು ಪ್ರತಿಪಾದಿಸಿದ್ದಾರೆ.

ನ.11ರಂದು ಕೃಷಿ ಆಯುಕ್ತರಿಗೆ ಸುದೀರ್ಘ 4 ಪುಟಗಳ ಪತ್ರ ಬರೆದಿರುವ ಜಿಲ್ಲಾಧಿಕಾರಿ ಜಿಲ್ಲೆಯ ರೈತರು ಎದುರಿಸು ತ್ತಿರುವ ತೊಂದರೆ ಮತ್ತು ಸರ್ಕಾರ ಕೈಗೊಳ್ಳ ಬೇಕಿರುವ ಕ್ರಮಗಳ ಕುರಿತು ಉಲ್ಲೇಖಿಸಿದ್ದಾರೆ. ಎನ್‌ಡಿಆರ್‌ಎಫ್/ಎಸ್‌ಪಿಆರ್‌ಎಫ್ ಮಾರ್ಗಸೂಚಿ ಅನ್ವಯ ರೋಗ ಅಥವಾ ಕೀಟ ಬಾಧೆಯಿಂದ ಬೆಳೆ ನಷ್ಟವಾದರೆ ಪರಿಹಾರ ನೀಡಲು ಸಾಧ್ಯವಿಲ್ಲ. ಆದರೆ, ರೈತರ ಮನೋ ಸ್ಥೈರ್ಯ ಕುಗ್ಗಿಸದಂತೆ ಅವರ ಆರ್ಥಿಕತೆಗೆ ತೊಂದರೆಯಾಗದಂತೆ ಕ್ರಮ ವಹಿಸಬೇಕಿದೆ. ವಿಶೇಷ ಪ್ರಕರಣವೆಂದು ಭಾವಿಸಿ ಪರಿಹಾರ ದೊರಕಿಸಿಕೊಡಬೇಕು. ಬಿತ್ತನೆ ಬೀಜ ವಿತರಿಸಿದ ಕಂಪನಿಗಳನ್ನೇ ಹೊಣೆಗಾರರನ್ನಾಗಿಸಬೇಕೆಂದು ಅವರು ಸ್ಪಷ್ಟವಾಗಿ ತಿಳಿಸಿದ್ದಾರೆ.

- ರೈತರನ್ನು ಸಂಕಷ್ಟದಿಂದ ಪಾರು ಮಾಡಿ
- ನಾಲ್ಕು ಪುಟಗಳ ಸುದೀರ್ಘ ಪತ್ರ
- 11,929 ರೈತರ ಜಮೀನಿನಲ್ಲಿ ಸರ್ವೆ



### 1,01,065 ಹೆಕ್ಟೇರ್‌ನಲ್ಲಿ ಬಿತ್ತನೆ

2025ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ಜಿಲ್ಲೆಯಲ್ಲಿ ಬಿತ್ತನೆಯಾಗಿರುವ 2,29,974 ಹೆಕ್ಟೇರ್ ಕೃಷಿ ಬೆಳೆಗಳ ಪೈಕಿ 1,01,065 ಹೆಕ್ಟೇರ್‌ನಲ್ಲಿ (ಶೇ. 40ರಷ್ಟು) ಮುಸುಕಿನ ಜೋಳ ಬೆಳೆ ಕೈಗೊಳ್ಳಲಾಗಿದೆ. ಜಿಲ್ಲೆಯ ಬಹುತೇಕ ರೈತರು ಹೈನುಗಾರಿಕೆಯನ್ನೇ ಅವಲಂಬಿಸಿದ್ದು, ಮೇವು ಹಾಗು ಕಾಳಿನ ಉದ್ದೇಶಕ್ಕೆ ಮುಸುಕಿನ ಜೋಳ ಬೆಳೆಯಲು ಪೂರಕ ವಾತಾವರಣ ಇದೆ. ರೈತರು ಅದೇ ಸಂಪ್ರದಾಯ ಮುಂದುವರಿಸಿಕೊಂಡು ಬಂದಿದ್ದಾರೆ. ಈ ಬಾರಿ ಪೆರೆನೊಸ್ಕ್ಲೆರೊಸ್ಪರ್ ಸೋರ್ಗಿ ಎನ್ನುವ ಶಿಲೀಂದ್ರ, ಗಾಳಿ ಮತ್ತು ಮಣ್ಣಿನ ಮೂಲಕ ವೇಗವಾಗಿ ಹರಡಿದೆ. ಬೆಳೆಯ ಬೆಳವಣಿಗೆ ಹಂತದಲ್ಲಿ ಮಳೆ ಹೆಚ್ಚಾದ ಕಾರಣ, ವಾತಾವರಣದಲ್ಲಿ ಹೆಚ್ಚಿನ ಆರ್ದ್ರತೆ ಯಿಂದ ಬೆಳೆ ಮೇಲೆ ನೇರ ಪರಿಣಾಮ ಬೀರಿದೆ.

| ಮುಸುಕಿನ ಜೋಳ ತಾಲ್ಲೂಕುವಾರು ನಷ್ಟದ ವಿವರ (ಹೆಕ್ಟೇರ್‌ಗಳಲ್ಲಿ) | | | |
|---|---|---|---|
| ತಾಲ್ಲೂಕು | ಬಿತ್ತನೆ ಪ್ರದೇಶ | ನಷ್ಟಕ್ಕೀಡಾದ ಪ್ರದೇಶ | ರೈತರ ಸಂಖ್ಯೆ |
| ಆಲೂರು | 11750 | 337.2 | 919 |
| ಅರಕಲಗೂಡು | 20500 | 79.68 | 134 |
| ಅರಸೀಕೆರೆ | 4850 | 504.8 | 884 |
| ಬೇಲೂರು | 11630 | 1402 | 2900 |
| ಚನ್ನರಾಯಪಟ್ಟಣ | 9185 | 484.8 | 1994 |
| ಹಾಸನ | 29990 | 2239 | 3680 |
| ಹೊಳೆನರಸೀಪುರ | 13160 | 608.1 | 1418 |
| ಒಟ್ಟು | 101065 | 5655.60 | 11,929 |

### ತಜ್ಞರ ತಂಡದಿಂದ ಪರಿಶೀಲನೆ

ಕಾರೆಕೆರೆ ಕೃಷಿ ಮಹಾ ವಿದ್ಯಾಲಯ, ಮಂಡ್ಯ ಹಾಗು ಕೇಂದ್ರ ಸರ್ಕಾರದ ವಿಜ್ಞಾನಿ ಗಳ ತಂಡ ಭೂಪ್ರದೇಶಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಈ ಕುರಿತು ಜಿಲ್ಲಾಡಳಿತ ಸರಣಿ ಸಭೆಗಳನ್ನು ನಡೆಸಿ ರೋಗ ಹತೋಟಿಗೆ ಹಲವಾರು ಕ್ರಮ ಕೈಗೊಂಡಿತು. ಆದರೂ ನಿಯಂತ್ರಣಕ್ಕೆ ಬಾರದಂತೆ ರೋಗ ಹರಡಿದ್ದು, ಅನ್ನದಾತರನ್ನು ನಷ್ಟಕ್ಕೆ ದೂಡಿದೆ. ಜಿಲ್ಲಾದ್ಯಂತ ಮುಸುಕಿನ ಜೋಳಕ್ಕೆ ಬಿಳಿಸುಳಿ ರೋಗ ಕಾಣಿಸಿಕೊಳ್ಳುತ್ತಿದ್ದಂತೆ ಕೃಷಿ ವಿಕಸಿತ ಸಂಕಲ್ಪ ಅಭಿಯಾನದಡಿ ರೈತರಿಗೆ ತಿಳವಳಿಕೆ ಮೂಡಿಸಲಾಯಿತಾದರೂ ಅಷ್ಟರಲ್ಲಿ ಪರಿಸ್ಥಿತಿ ಕೈ ಮೀರಿತ್ತು.



ಈ ಸಮಸ್ಯೆ ಹೆಚ್ಚಾಗಲು ಕಳಪೆ ಬಿತ್ತನೆ ಬೀಜ ವಿತರಣೆಯೇ ಕಾರಣವೆಂದು ಅಧಿಕಾರಿಗಳು ವರದಿಯಲ್ಲಿ ಪ್ರಸ್ತಾಪಿಸಿದ್ದರಿಂದ ಬೀಜ ವಿತರಣೆ ಮಾಡಿದ ಎಲ್ಲಾ ಕಂಪನಿ ಹಾಗು ವಿತರಕರ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ. ಬೆಳೆ ನಷ್ಟದ ನಿಖರ ಮಾಹಿತಿಗಾಗಿ ತಾಲ್ಲೂಕು ಮಟ್ಟದಲ್ಲಿ ತಹಶೀಲ್ದಾರ್ ಅಧ್ಯಕ್ಷತೆಯಲ್ಲಿ ಸಹಾಯಕ ಕೃಷಿ ನಿರ್ದೇಶಕರು, ರೈತ ಮುಖಂಡರ ನೇತೃತ್ವದಲ್ಲಿ ಸರ್ವೆ ನಡೆಸಲಾಗಿದೆ. ಜಿಲ್ಲೆಯಲ್ಲಿ 11,929 ರೈತರ 5655 ಹೆಕ್ಟೇರ್ ಪ್ರದೇಶದಲ್ಲಿ ಬೆಳೆ ಹಾನಿಯಾಗಿರುವುದನ್ನು ದೃಢಪಡಿಸಲಾಗಿದೆ.

### ರೈತರಿಂದ ಪ್ರತಿಭಟನೆ

ಮುಸುಕಿನ ಜೋಳಕ್ಕೆ ಬಿಳಿಸುಳಿ ರೋಗ ಕಾಣಿಸಿಕೊಂಡ ಹಿನ್ನಲೆ ತಕ್ಷಣ ಪರಿಹಾರ ಕಲ್ಪಿಸಬೇಕು ಹಾಗು ಬಿತ್ತನೆ ಬೀಜ ವಿತರಿಸಿರುವವರ ವಿರುದ್ಧ ಕ್ರಮ ಜರುಗಿಸಬೇಕೆಂದು ಜಿಲ್ಲೆಯ ವಿವಿಧೆಡೆ ಅನ್ನದಾತರು ಪ್ರತಿಭಟನೆ ನಡೆಸಿದ್ದರಿಂದ ಸಮಸ್ಯೆಯನ್ನು ಜಿಲ್ಲಾಡಳಿತ ಗಂಭೀರವಾಗಿ ಪರಿಗಣಿಸಿತು. ಆ. 18 ರಂದು ಜಿಲ್ಲಾಧಿಕಾರಿ ಕಚೇರಿಯಲ್ಲಿ ನಡೆದ ರೈತರ ಸಭೆಯಲ್ಲೂ ಈ ವಿಚಾರ ಚರ್ಚೆಗೊಳ ಗಾಯಿ ತು. ಈ ಎಲ್ಲಾ ಅಂಶಗಳನ್ನು ಗಂಭೀರವಾಗಿ ಪರಿಗಣಿಸಿದ ಜಿಲ್ಲಾಧಿಕಾರಿ ಅವರು ವಿಶೇಷ ಪ್ರಕರಣವೆಂದು ಪರಿಗಣಿಸಿ ಪರಿಹಾರ ಬಿಡುಗಡೆ ಮಾಡುವಂತೆ ಮನವಿ ಮಾಡಿದ್ದಾರೆ.

# ಪರಭಾಷೆ ಪೈಪೋಟಿಯಲ್ಲಿ ಮಾತೃಭಾಷೆ ಆಸಕ್ತಿ ಅಗತ್ಯ



• ಪ್ರಜೋದಯ ವರದಿ

**ಅರಸೀಕೆರೆ:** ಭಾಷಾಭಿಮಾನ ಎಲ್ಲರಿಗೂ ಅಗತ್ಯವಾಗಿದ್ದು, ಪರಭಾಷೆಗಳ ಪೈಪೋಟಿಯ ಪ್ರಸ್ತುತ ದಿನಗಳಲ್ಲಿ ನಮ್ಮ ಮಾತೃಭಾಷೆಗೆ ಹೆಚ್ಚಿನ ಆಸಕ್ತಿ ತೋರುವ ಸಮಯ ಬಂದಿದೆ ಎಂದು ಕರವೇ ತಾಲ್ಲೂಕು ಘಟಕ ಅಧ್ಯಕ್ಷ ಕಿರಣ್ ಕುಮಾರ್ ಅವರು ಹೇಳಿದರು.

ಹೊಯ್ಸಳ ನಗರ ಬಡಾವಣೆಯ ಅನಂತಣ್ಣ ಅವರ ನಿವಾಸದಲ್ಲಿ ಕೇಂದ್ರ ಕನ್ನಡ ಸಾಹಿತ್ಯ ವೇದಿಕೆ ತಾಲ್ಲೂಕು ಘಟಕದಿಂದ ಆಯೋಜಿಸಿದ್ದ ರಾಜ್ಯೋತ್ಸವ ಹಾಗು 12ನೇ ಮನೆ-ಮನೆ ಕವಿಗೋಷ್ಠಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಕನ್ನಡ ಸಾಹಿತ್ಯಾಸಕ್ತರು ಒಂದೆಡೆ ಸೇರಿ ಭಾಷೆ ಉಳಿವಿಗಾಗಿ ಅಕ್ಷರಗಳ ಭಂಡಾರವನ್ನು ಪೋಷಿಸುತ್ತಿರುವುದು ಹೆಮ್ಮೆಯ ವಿಚಾರವಾಗಿದೆ ಎಂದರು.

ಮನೆ ಮನೆಗಳ ಅಂಗಳದಲ್ಲಿ ಇಳಿಹೊತ್ತಿನ ಸಮಯದಲ್ಲಿ ಕವನ, ಸಾಹಿತ್ಯ ಮತ್ತು ಬರಹಗಳನ್ನು ಪರಿಚಯಿಸುವ ಪರಿಪಾಠ ಶ್ಲಾಘನೀಯ. ಕೇಂದ್ರ ಕನ್ನಡ ಸಾಹಿತ್ಯ ವೇದಿಕೆ ಬಳಗದ ಸದಸ್ಯರು ಒಂದೆಡೆ ಸೇರಿ ಉದಯೋನ್ಮುಖ ಬರಹಗಾರರು ಮತ್ತು ಆಸಕ್ತರಿಗೆ ವೇದಿಕೆ ಸೃಷ್ಟಿಸಿ ಕನ್ನಡ ಸಾಹಿತ್ಯ ಲೋಕಕ್ಕೆ ಮತ್ತಷ್ಟು ಶಕ್ತಿ ನೀಡುತ್ತಿರುವುದು ಸ್ವಾಗತಾರ್ಹವಾಗಿದೆ. ಸಾಹಿತಿ ಜೆ.ಪಿ.ರಾಜರತ್ನಂ ಅವರ ನುಡಿ ಸಾರದಂತೆ ಮೂಲ ಕನ್ನಡಿಗರಿಗೆ ಯಾವುದೇ ರೂಪದಲ್ಲಿ ಅನ್ಯ ಭಾಷಿಕರ ಹಾವಳಿ ಬಂದರೂ ಅದಕ್ಕೆ ತಕ್ಕ ಉತ್ತರ ನೀಡಲು ಎಂದೆಂದೂ ಸಿದ್ಧರಿದ್ದೇವೆಂದು ಹೇಳಿದರು.

» ನಾಲ್ಕನೇ ಪುಟದಲ್ಲಿ

